243 (311) : ಶ್ರೀ ಹಾಲಪ್ಪ ಹೆಚ್. (ಹೊಸನಗರ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ಯೋಜನೆಯಡಿಯಲ್ಲಿ ಶಿವಮೊಗ್ಗ ತಾಲ್ಲೂಕಿನಲ್ಲಿ ಬರುವ ಮೂರು ಏತ ನೀರಾವರಿ ಯೋಜನೆಗಳ ಕಾಮಗಾರಿಗಳ ಪ್ರಸ್ತಾವನೆ ಈಗ ಯಾವ ಹಂತದಲ್ಲಿದೆ.

ಆ) ಹಾಲಿ ಯೋಜನೆಯು ಅರಣ್ಯ ಇಲಾಖೆ ವ್ಯಾಪ್ತಿಗೆ ಬರುವುದರಿಂದ ಬದಲಿ ಜಮೀನನ್ನು ಕೊಡುವ ವ್ಯವಸ್ಥೆ ಇದೆಯೇ;

ಇ) ಇದ್ದಲ್ಲಿ ಇದರ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ತುಂಗಾ ಮೇಲ್ದಂಡೆ ಯೋಜನೆಯಡಿಯಲ್ಲಿ ಯಾವುದೇ ಏತ ನೀರಾವರಿ ಕಾಮಗಾರಿಗಳು ಇರುವುದಿಲ್ಲ.

ತುಂಗಾ ಮೇಲ್ದಂಡೆ ಯೋಜನೆ ವಲಯ, ಶಿವಮೊಗ್ಗ ಅಡಿಯಲ್ಲಿ ತುಂಗಾ ಏತ ನೀರಾವರಿ ಯೋಜನೆಯು ಇರುತ್ತದೆ. ಈ ಯೋಜನೆಯಂತೆ, ಶಿವಮೊಗ್ಗ ತಾಲ್ಲೂಕು ಗಾಜನೂರಿನ ಬಳಿ ಇರುವ ತುಂಗಾ ಅಣೆಕಟ್ಟಿನ ಜಲಾಶಯದ ನೀರನ್ನು ಎತ್ತಿ ಶಿವಮೊಗ್ಗ ತಾಲ್ಲೂಕಿನ ಮೂರು ಕೆರೆಗಳಾದ ಹಾಯ್‌ಹೊಳೆ, ಬಾರೆಹಳ್ಳ ಹಾಗೂ ಗೌಡನಕೆರೆಗಳ ಅಡಿ ಬರುವ ಅಚ್ಚುಕಟ್ಟಿಗೆ ನೀರಿನ ಸೌಲಭ್ಯ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಈ ಕೆರೆಗಳಿಗೆ ನೀರೊದಗಿಸುವ ಕಾಮಗಾರಿಗೆ ಬೇಕಿರುವ 173 ಎಕರೆ ಅಭಯಾರಣ್ಯ ಪ್ರದೇಶ ಬಿಡುಗಡೆಯಾಗದೇ ಇರುವುದರಿಂದ ಈ ಯೋಜನೆಯು ಇನ್ನೂ ಪ್ರಾರಂಭಿಕ ಹಂತದಲ್ಲಿರುತ್ತದೆ.

ಆ) ಈ ಯೋಜನೆಯ ಕಾಮಗಾರಿಗೆ ಬೇಕಿರುವ ಪ್ರದೇಶವು ಅಭಯಾರಣ್ಯದಲ್ಲಿ ಬರುವುದರಿಂದ ಈ ಜಮೀನಿನ ಬದಲಾಗಿ ಬೇರೆ ಜಮೀನನ್ನು ಅರಣ್ಯ ಇಲಾಖೆಗೆ ಅರಣ್ಯ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ನೀಡಬೇಕಾಗುತ್ತದೆ.

ಇ) ಶಿವಮೊಗ್ಗ ತಾಲ್ಲೂಕು ಕುಂಸಿ ಹೋಬಳಿ, ಚೋರಡಿ ಗ್ರಾಮದ ಸರ್ವೆ ನಂಬರ್ 196 ರಲ್ಲಿರುವ 173 ಎಕರೆ ಜಮೀನು ತುಂಗಾ ಏತ ನೀರಾವರಿ ಯೋಜನೆಗೆ ಬೇಕಿರುವ 173 ಎಕರೆ ಅಭಯಾರಣ್ಯದ ಭೂಮಿಗೆ ಬದಲಾಗಿ ಅರಣ್ಯ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ಲಭ್ಯವಿರುವುದಾಗಿ ಶಿವಮೊಗ್ಗ ಜಿಲ್ಲಾಧಿಕಾರಿಗಳು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

244 (313) : ಶ್ರೀ ಹಾಲಪ್ಪ ಹೆಚ್. (ಹೊಸನಗರ) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ (ಐ.ಡಿ.ಎಸ್.ಎಂ.ಟಿ.) ಸಮಗ್ರ ಮಧ್ಯಮ ಪಟ್ಟಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಎಷ್ಟು ತಾಲ್ಲೂಕುಗಳನ್ನು ಆಯ್ಕೆ ಮಾಡಲಾಗಿದೆ. (ತಾಲ್ಲೂಕುವಾರು ವಿವರ ಸಲ್ಲಿಸುವುದು).

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು)

ಅ) ರಾಜ್ಯದಲ್ಲಿ (ಐ.ಡಿ.ಎಸ್.ಎಂ.ಟಿ) ಸಮಗ್ರ ಮಧ್ಯಮ ಪಟ್ಟಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಒಟ್ಟು 176 ಪಟ್ಟಣಗಳನ್ನು ಆಯ್ಕೆ ಮಾಡಲಾಗಿದ್ದು, (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಅನುಬಂಧ

(ಐ.ಡಿ.ಎಸ್.ಎಂ.ಟಿ) ಯೋಜನೆಯಡಿ ಆಯ್ಕೆಗೊಂಡಿರುವ ಪಟ್ಟಣಗಳ ವಿವರ

1.	ಬೆಂಗಳೂರು ಗ್ರಾಮಾಂತರ :		
	ನಗರ ಸಭೆ	:	ಚನ್ನಪಟ್ಟಣ, ರಾಜನಗರ, ದೊಡ್ಡಬಳ್ಳಾಪುರ.
	ಪುರಸಭೆ	:	ಮಾಗಡಿ, ಹೊಸಕೋಟೆ, ದೇವನಹಳ್ಳಿ, ಅನೇಕಲ್, ಕನಕಪುರ, ವಿಜಯಪುರ
	ಪಟ್ಟಣಪಂಚಾಯತಿ	:	ನೆಲಮಂಗಲ.
2.	ದಾವಣಗೆರೆ		
	ನಗರಸಭೆ	:	ಹರಿಹರ, ದಾವಣಗೆರೆ.
	ಪುರಸಭೆ	:	ಚನ್ನಗಿರಿ.
	ಪಟ್ಟಣಪಂಚಾಯತಿ	:	ಹರಪ್ಪನಹಳ್ಳಿ, ಹೊನ್ನಾಳಿ
3.	ತುಮಕೂರು		
	ನಗರಸಭೆ	:	ತುಮಕೂರು,
	ಪುರಸಭೆ	:	ಶಿರಾ, ಕುಣಿಗಲ್, ತಿಪಟೂರ್, ಚಿಕ್ಕನಾಯಕನಹಳ್ಳಿ, ಮಧುಗಿರಿ
	ಪಟ್ಟಣಪಂಚಾಯತಿ	:	ಗುಬ್ಬಿ, ತುರುವೇಕೆರೆ.
4.	ಕೋಲಾರ		
	ನಗರಸಭೆ	:	ಕೋಲಾರ, ಚಿಂತಾಮಣಿ, ಚಿಕ್ಕಬಳ್ಳಾಪುರ, ಕೆ.ಜಿ.ಎಫ್,
	ಪುರಸಭೆ	:	ಗೌರಿಬಿದನೂರು, ಮುಳಬಾಗಿಲು, ಮಾಲೂರು, ಶಿಡ್ಲಘಟ್ಟ, ಬಂಗಾರಪೇಟೆ.
	ಪಟ್ಟಣಪಂಚಾಯತಿ	:	ಬಾಗೇಪಲ್ಲಿ, ಶ್ರೀನಿವಾಸಪುರ
5.	ಶಿವಮೊಗ್ಗ		
	ನಗರಸಭೆ	:	ಶಿವಮೊಗ್ಗ, ಭದ್ರಾವತಿ
	ಪುರಸಭೆ	:	ಸಾಗರ, ತೀರ್ಥಹಳ್ಳಿ, ಶಿಕಾರಿಪುರ
	ಪಟ್ಟಣಪಂಚಾಯತಿ	:	ಜೋಗ್ ಕಾರ್ಗಲ್, ಸೊರಬ, ಹೊಸನಗರ

6.	ಚಿತ್ರದುರ್ಗ		
	ನಗರಸಭೆ	:	ಚಿತ್ರದುರ್ಗ
	ಪುರಸಭೆ	:	ಚಳ್ಳಕೆರೆ, ಹಿರಿಯೂರು
	ಪಟ್ಟಣಪಂಚಾಯತಿ	:	ಹೊಸದುರ್ಗ, ಮೊಳಕಾಲ್ಮೂರು, ಹೊಳಲಕೆರೆ
7.	ಮೈಸೂರು		
	ಪುರಸಭೆ	:	ಕೆ.ಆರ್.ನಗರ, ಹುಣಸೂರು, ನಂಜನಗೂಡು,
	ಪಟ್ಟಣಪಂಚಾಯತಿ	:	ಬನ್ನೂರು
8.	ಹಾಸನ		
	ನಗರಸಭೆ	:	ಹಾಸನ
	ಪುರಸಭೆ	:	ಅರಸೀಕೆರೆ, ಹೊಳೆನರಸೀಪುರ, ಚನ್ನರಾಯಪಟ್ಟಣ
	ಪಟ್ಟಣಪಂಚಾಯತಿ	:	ಅರಕಲಗೂಡು, ಬೇಲೂರು
9.	ಚಿಕ್ಕಮಗಳೂರು		
	ನಗರಸಭೆ	:	ಚಿಕ್ಕಮಗಳೂರು
	ಪುರಸಭೆ	:	ಕಡೂರು, ಬೀರೂರ್, ತರಿಕೆರೆ
	ಪಟ್ಟಣಪಂಚಾಯತಿ	:	ಶ್ರಿಂಗೇರಿ, ಕೊಪ್ಪ, ನರಸಿಂಹರಾಜಪುರ, ಮೂಡಿಗೆರೆ
10.	ಚಾಮರಾಜನಗರ		
	ನಗರಸಭೆ	:	ಚಾಮರಾಜನಗರ
	ಪುರಸಭೆ	:	ಕೊಳ್ಳೇಗಾಲ, ಗುಂಡ್ಲುಪೇಟೆ
11.	ಮಂಡ್ಯ		
	ನಗರಸಭೆ	:	ಮಂಡ್ಯ
	ಪುರಸಭೆ	:	ಮಳವಳ್ಳಿ, ಶ್ರೀರಂಗಪಟ್ಟಣ
	ಪಟ್ಟಣಪಂಚಾಯತಿ	:	ಕೆ.ಆರ್.ಪುರ, ನಾಗಮಂಗಲ
12.	ದಕ್ಷಿಣಕನ್ನಡ		
	ನಗರಸಭೆ	:	ಮೂಡಬಿದ್ರಿ, ಪುತ್ತೂರು
	ಪುರಸಭೆ	:	ಬಂಟ್ವಾಳ, ಸುಳ್ಯ, ಮುಲ್ಕಿ
	ಪಟ್ಟಣಪಂಚಾಯತಿ		
13.	ಕೊಡಗು		
	ನಗರಸಭೆ	:	ಮಡಿಕೇರಿ
	ಪಟ್ಟಣಪಂಚಾಯತಿ	:	ಕುಶಾಲನಗರ
14.	ಉಡುಪಿ		
	ನಗರಸಭೆ	:	ಉಡುಪಿ
	ಪುರಸಭೆ	:	ಕಾರ್ಕಳ, ಕುಂದಾಪುರ

15. ಬೆಳಗಾವಿ

ನಗರಸಭೆ	:	ನಿಪ್ಪಾಣಿ, ಗೋಕಾಕ್,
ಪುರಸಭೆ	:	ಬೈಲಹೊಂಗಲ, ಮೂಡಲಗಿ, ಅಥಣಿ, ರಾಮದುರ್ಗ, ಸಂಕೇಶ್ವರ, ಸವದತ್ತಿ, ಚಿಕ್ಕೋಡಿ
ಪಟ್ಟಣಪಂಚಾಯತಿ	:	ಕೊಣ್ಣೂರು, ಖಾನಾಪುರ, ಕುಡಚಿ, ಹುಕ್ಕೇರಿ, ಸದಲಗ

16. ಬಾಗಲಕೋಟೆ

ನಗರಸಭೆ	:	ಬಾಗಲಕೋಟೆ, ರಬಕವಿ ಬನಹಟ್ಟಿ
ಪುರಸಭೆ	:	ಬಾದಾಮಿ, ಇಳಕಲ್, ಮುಧೋಳ, ಜಮಖಂಡಿ, ಮಹಲಿಂಗಪುರ
ಪಟ್ಟಣಪಂಚಾಯತಿ	:	ಕೆರೂರು, ಹುನಗುಂದ, ತೇರದಾಳ್, ಬೀಳಗಿ

17. ಧಾರವಾಡ

ಪುರಸಭೆ	:	ಅಣ್ಣಿಗೇರಿ
ಪಟ್ಟಣಪಂಚಾಯತಿ	:	ನವಲಗುಂದ, ಅಳ್ನಾವರ, ಕುಂದಗೋಳ್, ಕಲಘಟಗಿ

18. ಹಾವೇರಿ

ನಗರಸಭೆ	:	ರಾಣಿಬೆನ್ನೂರು, ಹಾವೇರಿ
ಪುರಸಭೆ	:	ಸವಣೂರು, ಹಾನಗಲ್
ಪಟ್ಟಣಪಂಚಾಯತಿ	:	ಶಿಗ್ಗಾವ್, ಬಂಕಾಪುರ

19. ಬಿಜಾಪುರ

ನಗರಸಭೆ	:	ಬಿಜಾಪುರ
ಪುರಸಭೆ	:	ಇಂಡಿ, ಮುದ್ದೇಬಿಹಾಳ್, ಸಿಂದಗಿ, ತಾಳೀಕೋಟೆ
ಪಟ್ಟಣಪಂಚಾಯತಿ	:	ಬಸವನಬಾಗೇವಾಡಿ

20. ಉತ್ತರಕನ್ನಡ

ನಗರಸಭೆ	:	ಶಿರಸಿ, ದಾಂಡೇಲಿ, ಕಾರವಾರ
ಪುರಸಭೆ	:	ಕುಮಟ
ಪಟ್ಟಣಪಂಚಾಯತಿ	:	ಹಳಿಯಾಳ, ಹೊನ್ನಾವರ, ಯಲ್ಲಾಪುರ, ಮುಂಡಗೋಡ, ಅಂಕೋಲಾ, ಸಿದ್ದಾಪುರ

21. ಗದಗ

ನಗರಸಭೆ	:	ಗದಗ ಬೆಟಗೇರಿ
ಪುರಸಭೆ	:	ಲಕ್ಷ್ಮೇಶ್ವರ, ಗಜೇಂದ್ರ ಘಡ್,
ಪಟ್ಟಣಪಂಚಾಯತಿ	:	ರೋಣ, ಮುಂಡರಗಿ, ಮುಳಗುಂದ, ಶಿರಹಟ್ಟಿ, ನರಗುಂದ

22. ಗುಲ್ಬರ್ಗಾ		
ನಗರ ಪಾಲಿಕೆ	:	ಗುಲ್ಬರ್ಗಾ
ಪುರಸಭೆ	:	ಶಹಾಪುರ, ಶೋರಾಪುರ, ಚಿಂಚೋಳಿ, ಆಳಂದ, ಯಾದಗಿರಿ, ಚಿತ್ತಾಪುರ, ಶಹಾಬಾದ್, ಸೇಡಂ.
ಪಟ್ಟಣಪಂಚಾಯತಿ	:	ಜೇವರಗಿ, ಗುರ್‌ಮಿಟ್‌ಕಲ್
23. ರಾಯಚೂರು		
ನಗರಸಭೆ	:	ರಾಯಚೂರು,
ಪುರಸಭೆ	:	ಮಾನ್ವಿ, ಸಿಂಧನೂರು, ಲಿಂಗಸಗೂರು.
24. ಬೀದರ್		
ನಗರಸಭೆ	:	ಬೀದರ್
ಪುರಸಭೆ	:	ಭಾಲ್ಕಿ, ಚಿಟಗುಪ್ಪ, ಹುಮ್ನಾಬಾದ್, ಬಸವಕಲ್ಯಾಣ, ಹೊಸಪೇಟೆ.
ಪಟ್ಟಣಪಂಚಾಯತಿ	:	ಕೊಟ್ಟೂರು.
25. ಬಳ್ಳಾರಿ		
ನಗರಸಭೆ	:	ಬಳ್ಳಾರಿ
ಪುರಸಭೆ	:	ಸಿರಗುಪ್ಪ,
ಪಟ್ಟಣಪಂಚಾಯತಿ	:	ಕಮಲಾಪುರ, ತೆಕ್ಕಲಕೋಟೆ, ಹೂನಿನಹಡಗಲಿ, ಸಂಡೂರು
26. ಕೊಪ್ಪಳ		
ನಗರಸಭೆ	:	ಕೊಪ್ಪಳ, ಗಂಗಾವತಿ

245 (874) : ಶ್ರೀ ಹಾಲಪ್ಪ ಹೆಚ್. (ಹೊಸನಗರ) ಮಾನ್ಯ ಪೌರಾಡಳಿತ ಹಾಗೂ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅರ್ಕಾವತಿ ಬಡಾವಣೆ ನಿರ್ಮಾಣಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ Priliminary ನೋಟಿಫಿಕೇಷನ್‌ನಂತೆ, ಯಾವ ಯಾವ ಗ್ರಾಮದಲ್ಲಿ ಎಷ್ಟೆಷ್ಟು ಎಕರೆ ಜಮೀನು ವಶಪಡಿಸಿಕೊಳ್ಳಲಾಗಿದೆ. (ಗ್ರಾಮವಾರು ವಿವರ ಒದಗಿಸುವುದು)

ಆ) ಅಂತಿಮವಾಗಿ ಎಷ್ಟು ವಿಸ್ತೀರ್ಣದ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ;

ಇ) ಡೀ ನೋಟಿಫಿಕೇಷನ್ ಮಾಡಿರುವ ಭೂಮಿಯ ವಿಸ್ತೀರ್ಣ ಎಷ್ಟು (ವಿವರ ನೀಡುವುದು)?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಅರ್ಕಾವತಿ ಬಡಾವಣೆಗಾಗಿ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಪ್ರಾಥಮಿಕ ಅಧಿಸೂಚನೆ ಸಂಖ್ಯೆ: ಬಿಡಿಎ:ಕಮೀಷನರ್:ಎಎಲ್‌ಎಒ:9:104:2002-03, ದಿನಾಂಕ: 3-2-2003ರಲ್ಲಿ 3,839 ಎಕರೆ 12 ಗುಂಟೆ ಜಮೀನಿಗೆ ಅಧಿಸೂಚನೆ ಹೊರಡಿಸಲಾಗಿದೆ. ವಿವರ ಕೆಳಕಂಡಂತೆ ಇರುತ್ತದೆ: